**ಸಾಕ್ಷಿಯನ್ನು ದಿನಾಂಕ 04-06-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ ವಾದಿ ಪರ ಶ್ರೀ ಎ.ಜೆ.ಕೆ. ವಕೀಲರಿಂದಃ-**

ನಾನು ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿದೆ. ಅದನ್ನು ನನ್ನ ಮುಖ್ಯ ವಿಚಾರಣೆಯ ಭಾಗವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸುತ್ತೇನೆ.

ಸಾಕ್ಷಿಯು ಮೂಲ ನೊಂದಾಯಿತ ಮೃತ್ಯು ಪತ್ರವನ್ನು ನೋಡಿ ಮೃತ್ಯು ಪತ್ರ ಬರೆಸಿಕೊಟ್ಟವರ ಇಬ್ಬರು ಸಾಕ್ಷಿದಾರರ ಮತ್ತು ಪತ್ರ ತಯಾರಿಸಿದವರ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ಮೃತ್ಯು ಪತ್ರಗಳನ್ನು ನಿಪಿ-**1** ಎಂದು ಮತ್ತು ಸದರಿ ಅವರ ಸಹಿಗಳನ್ನು ನಿಪಿ-**1**(ಎ), **1**(ಬಿ), **1**(ಸಿ) ಮತ್ತು **1**(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಮೂಲ ನೊಂದಾಯಿತ ಕರಾರು ಪತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-**2** ಮತ್ತು ನಿಪಿ-**3** ಎಂದು ಗುರುತಿಸಲಾಯಿತು. ಮರಣ ಪ್ರಮಾಣ ಪತ್ರವನ್ನು ನಿಪಿ-**4**, ಎಂ.ಆರ್ ನಕಲನ್ನು ನಿಪಿ-**5**, ಪಹಣಿಯನ್ನು ನಿಪಿ-**6**, ತಹಶೀಲ್ದಾರ್ ಕಛೇರಿಗೆ ಕೊಟ್ಟಿರುವ ಅರ್ಜಿಯ ಸ್ವೀಕೃತಿ ಪ್ರತಿಯನ್ನು ನಿಪಿ-**7**, ತಹಶೀಲ್ದಾರ್ ರವರು ಕೊಟ್ಟಿರುವ ಹಿಂಬಹರವನ್ನು ನಿಪಿ-**8**, ವಂಶವೃಕ್ಷವನ್ನು ನಿಪಿ-**9** ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.